ಘನ ತ್ಯಾಜ್ಯ ವಿಲೇವಾರಿಗೆ ತೆಗೆದುಕೊಂಡಿರುವ ಕ್ರಮ

1878 (3072); ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ)

ಅ) ಬೀದರ್ ಜಿಲ್ಲೆಯಲ್ಲಿನ ನಗರಸಭೆ, ಪುರಸಭೆ ಹಾಗೂ ಪಟ್ಟಣ ಪಂಚಾಯತ್‌ಗಳಲ್ಲಿ ಘನ ತ್ಯಾಜ್ಯ ವಿಲೇವಾರಿಗಾಗಿ ಸರ್ಕಾರದಿಂದ ಎಷ್ಟು; ಅನುದಾನವನ್ನು ಒದಗಿಸಲಾಗಿದೆ (ವರ್ಷವಾರು ವಿವರ ನೀಡುವುದು);

ಆ) ಈ ಅನುದಾನದಲ್ಲಿ ಎಷ್ಟು ವೆಚ್ಚ ಮಾಡಲಾಗಿದೆ; ಎಷ್ಟು ಬಾಕಿ ಇದೆ; ಬಾಕಿ ಉಳಿಯಲು ಕಾರಣವೇನು;

ಇ) ಸರ್ಕಾರ ಅನುದಾನ ನೀಡಿದ್ದರೂ ಇಲ್ಲಿಯವರೆಗೆ ಯಾವುದೇ ನಗರ ಸಭೆ, ಪುರಸಭೆಗಳು ಘನ ತ್ಯಾಜ್ಯ ವಿಲೇವಾರಿ ಪ್ರದೇಶದಲ್ಲಿ ಕಸವನ್ನು ಹಾಕದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈಗಲಾದರೂ ಸಂಪೂರ್ಣ ಅನುದಾನ ಬಳಕೆ ಮಾಡಿಕೊಂಡು ಘನ ತ್ಯಾಜ್ಯ ವಿಲೇವಾರಿಯನ್ನು ಯಶಸ್ವಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಡಾ: ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ವಿವರಗಳು ಕೆಳಗಿನಂತಿವೆ. (ರೂ. ಲಕ್ಷಗಳಲ್ಲಿ)

ಕ್ರ. ಸಂ.	ನಗರ ಸ್ಥಳೀಯ ಸಂಸ್ಥೆಯ ಹೆಸರು	ಘನತ್ಯಾಜ್ಯ ವಿಲೇವಾರಿಗಾಗಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ			ಒಟ್ಟು ಅನುದಾನ
		2011–12	2012–13	2013–14	
1	ಬೀದರ್	53.75	120.00	15.00	188.75

2	ಬಸವಕಲ್ಯಾಣ	20.00	23.5	32.00	75.50
3	ಭಾಲ್ಕಿ	15.00	25.00	15.00	55.00
4	ಚಿಟಗುಪ್ಪ	78.36	34.72	18.00	131.06
5	ಹುಮ್ನಾಬಾದ್	19.15	47.70	20.00	86.85
6	ಔರಾದ್	23.70	14.00	49.00	86.70

ಆ) ವಿವರಗಳು ಕೆಳಗಿನಂತಿವೆ (ರೂ. ಲಕ್ಷಗಳಲ್ಲಿ)

ಕ್ರ. ಸಂ.	ನಗರ ಸ್ಥಳೀಯ ಸಂಸ್ಥೆಯ ಹೆಸರು	ಬಿಡುಗಡೆಯಾದ ಒಟ್ಟು ಅನುದಾನ	ವೆಚ್ಚ ಮಾಡಿರುವ ಮೊತ್ತ	ಬಾಕಿ ಉಳಿದಿರುವ ಮೊತ್ತ	ಬಾಕಿ ಉಳಿಯಲು ಕಾರಣಗಳು
1	ಬೀದರ್ ನಗರಸಭೆ	188.75	188.75	0.00	
2	ಬಸವಕಲ್ಯಾಣ ನಗರಸಭೆ	75.50	12.00	63.50	`8.00 ಲಕ್ಷ ವೆಚ್ಚದ ವೇ–ಬ್ರಿಡ್ಜ್ ಕಾಮಗಾರಿ ಪ್ರಗತಿಯಲ್ಲಿದೆ. ಟಿಪ್ಪರ್, ಟ್ರೈಲರ್, ಕಂಟೈನರ್, ಪ್ಲಾಸ್ಟಿಕ್, ಬೇಲಿಂಗ್ ಮಷಿನ್ ಖರೀದಿಗಾಗಿ ಟೆಂಡರ್ ಮಂಜೂರಿ ಪಡೆದು ಕಾರ್ಯಾದೇಶ ನೀಡಲಾಗುವುದು.
3	ಭಾಲ್ಕಿ	55.00	18.75	36.25	ಕಾಂಪೌಂಡ್ ಗೋಡೆ ನಿರ್ಮಾಣ ಮತ್ತು

	ಪುರಸಭೆ				ಸಂಪರ್ಕ ರಸ್ತೆ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ.
4	ಚಿಟಗುಪ್ಪ ಪುರಸಭೆ	131.06	118.56	12.50	ವಿಂಡ್‌ರೀ ಪ್ಲಾಟ್‌ಫಾರ್ಮ, ಸ್ಯಾನಿಟರಿ ಪಿಟ್ ಕಾಮಗಾರಿಯನ್ನು ನಿರ್ಮಿತಿ ಕೇಂದ್ರ ಬೀದರರವರಿಗೆ ವಹಿಸಲಾಗಿದೆ. ಕಾಮಗಾರಿ ಮೊತ್ತ ಶೇ. 75 ರಷ್ಟು ಜಮಾ ಮಾಡಲಾಗಿದ್ದು ಬಾಕಿ 25% ಮೊತ್ತವನ್ನು ಕಾಮಗಾರಿ ಪೂರ್ಣಗೊಂಡ ನಂತರ ಪಾವತಿಸಲಾಗುವುದು.
5	ಹುಮ್ನಾಬಾದ್ ಪುರಸಭೆ	86.85	82.07	4.78	ಸ್ಯಾನಿಟರಿ ಪಿಟ್, ಆಂತರಿಕ ರಸ್ತೆ ನಿರ್ಮಾಣ ಕಾಮಗಾರಿಯನ್ನು ನಿರ್ಮಿತಿ ಕೇಂದ್ರ ಬೀದರ್‌ರವರಿಗೆ

					ವಹಿಸಲಾಗಿದೆ. ಕಾಮಗಾರಿ ಮೊತ್ತ ಶೇ. 75 ರಷ್ಟು ಜಮಾ ಮಾಡಲಾಗಿದ್ದು 25% ಮೊತ್ತವನ್ನು ಕಾಮಗಾರಿ ಪೂರ್ಣಗೊಂಡ ನಂತರ ಪಾವತಿಸಲಾಗುವುದು.
6	ಔರಾದ್ ಪಟ್ಟಣ ಪಂಚಾಯಿತಿ	86.70	43.70	43.00	ಕಾಂಪೌಂಡ್ ಗೋಡೆ, ಎರೆಹುಳು ಗೊಬ್ಬರ ಘಟಕ, ಆಂತರಿಕ ರಸ್ತೆ, ಸ್ಯಾನಿಟರಿ ಪಿಟ್, ವಿಂಡ್‌ರೋ ಪ್ಲಾಟ್‌ಫಾರ್ಮ ನಿರ್ಮಾಣದ ಕಾಮಗಾರಿಗಳನ್ನು ನಿರ್ಮಿತಿ ಕೇಂದ್ರ ಬೀದರ್ ಇವರಿಗೆ ವಹಿಸಲಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.

ಇ) ವಿವರಗಳು ಕೆಳಗಿನಂತಿವೆ:

ಕ್ರ. ಸಂ.	ನಗರ ಸ್ಥಳೀಯ ಸಂಸ್ಥೆಯ ಹೆಸರು	ಸಂಪೂರ್ಣ ಅನುದಾನ ಬಳಕೆ ಮಾಡಿಕೊಂಡು ಘನತ್ಯಾಜ್ಯ ವಿಲೇವಾರಿಯನ್ನು ಯಶಸ್ವಿಗೊಳಿಸಲು ಸ್ಥಳೀಯ ಸಂಸ್ಥೆಗಳು ತೆಗೆದುಕೊಂಡಿರುವ ಕ್ರಮಗಳು
1	ಬೀದರ್ ನಗರಸಭೆ	ಘನತ್ಯಾಜ್ಯ ವಸ್ತುಗಳನ್ನು ನೆಲಭರ್ತಿ ಜಾಗದಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ನೆಲಭರ್ತಿ ಜಾಗದಲ್ಲಿ ಕಾಂಪೌಂಡ್ ಗೋಡೆ, ಆಂತರಿಕ ರಸ್ತೆಗಳು, ಸ್ಯಾನಿಟರಿ ಪಿಟ್, ವಿಂಡ್‌ರೋ ಪ್ಲಾಟ್‌ಫಾರ್ಮ ಸೌಲಭ್ಯಗಳನ್ನು ನಿರ್ಮಿಸಲಾಗಿದೆ. ಒಣತ್ಯಾಜ್ಯ ಸಂಗ್ರಹಣೆಗಾಗಿ ಎರಡು ಕಡೆ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸಲಾಘಿದೆ. ಟಿಪಿಡಿ ಸಾಮರ್ಥ್ಯದ ಬಯೋಗ್ಯಾಸ್ ಘಟಕ ಸ್ಥಾಪನೆಗಾಗಿ ಪ್ರಸ್ತಾವನೆ ತಯಾರಿಸಲಾಗಿದೆ.
2	ಬಸವಕಲ್ಯಾಣ ನಗರಸಭೆ	ನೆಲಭರ್ತಿ ಜಾಗಕ್ಕೆ ಘನತ್ಯಾಜ್ಯ ವಸ್ತುಗಳನ್ನು ಸಾಗಿಸಿ ವಿಲೇವಾರಿ ಮಾಡಲಾಗುತ್ತಿದೆ. ನೆಲಭರ್ತಿ ಜಾಗದಲ್ಲಿ ಕಾಂಪೌಂಡ್ ಗೋಡೆ, ಎರೆಹುಳು, ಗೊಬ್ಬರದ ಘಟಕ, ಇಂಜಿನಿಯರ್ಡ ಪಿಟ್ ನಿರ್ಮಾಣ ಮಾಡಲಾಗಿದೆ.
3	ಭಾಲ್ಕಿ ಪುರಸಭೆ	ನೆಲಭರ್ತಿ ಜಾಗದಲ್ಲಿ ತ್ಯಾಜ್ಯವನ್ನು ವಿಲೇವಾರಿ ಮಾಡಲಾಗುತ್ತಿದೆ. ನೆಲಭರ್ತಿ ಜಾಗದಲ್ಲಿ ಕಾಂಪೌಂಡ್ ಗೋಡೆ, ಕಾವಲುಗಾರನ ಕೋಣೆ, ಸಂಪರ್ಕ ರಸ್ತೆ, ಕೊಳವೆ ಬಾವಿ ಸೌಲಭ್ಯಗಳನ್ನು ನಿರ್ಮಿಸಲಾಗಿದೆ.
4	ಚಿಟಗುಪ್ಪ	ಘನತ್ಯಾಜ್ಯ ವಸ್ತುಗಳನ್ನು ಕಂಟೈನರ್‌ಗಳ ಮೂಲಕ

	ಪುರಸಭೆ	ನೆಲಭರ್ತಿ ಜಾಗಕ್ಕೆ ಸಾಗಿಸಿ ಪಿಟ್‌ನಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ಘನತ್ಯಾಜ್ಯ ವಸ್ತು ಸಂಸ್ಕರಣೆಗಾಗಿ ವಿಂಡ್‌ರೋ ಪ್ಲಾಟ್‌ಫಾರಂ ಮತ್ತು ಎರೆಹುಳು ಗೊಬ್ಬರ ಸೌಲಭ್ಯಗಳನ್ನು ನಿರ್ಮಿಸಲಾಗುತ್ತಿದೆ. ಪಟ್ಟಣದಲ್ಲಿ ಒಣಕಸ ಸಂಗ್ರಹಣೆಗಾಗಿ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ.
5	ಹುಮ್ನಾಬಾದ್ ಪುರಸಭೆ	ಘನತ್ಯಾಜ್ಯ ವಸ್ತುಗಳನ್ನು ಕಂಟೈನರ್‌ಗಳ ಮೂಲಕ ನೆಲಭರ್ತಿ ಜಾಗಕ್ಕೆ ಸಾಗಿಸಿ ಪಿಟ್‌ನಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ತ್ಯಾಜ್ಯ ಸಂಸ್ಕರಣೆಗಾಗಿ ವಿಂಡ್‌ರೋ ಪ್ಲಾಟ್‌ಫಾರಂ ಮತ್ತು ಎರೆಹುಳುಗೊಬ್ಬರ ಸೌಲಭ್ಯಗಳನ್ನ ನಿರ್ಮಿಸಲಾಗುತ್ತಿದೆ. ಪಟ್ಟಣದಲ್ಲಿ ಒಣಕಸ ಸಂಗ್ರಹಣೆಗಾಗಿ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ.
6	ಔರಾದ್ ಪಟ್ಟಣ ಪಂಚಾಯಿತಿ	ನೆಲಭರ್ತಿ ಜಾಗದಲ್ಲಿ ತ್ಯಾಜ್ಯವನ್ನು ವಿಲೇವಾರಿ ಮಾಡಲಾಗುತ್ತಿದೆ. ತ್ಯಾಜ್ಯ ಸಂಸ್ಕರಣೆಗಾಗಿ ವಿಂಡ್‌ರೋ ಪ್ಲಾಟ್‌ಫಾರಂ ಮತ್ತು ಎರೆಹುಳುಗೊಬ್ಬರ ಸೌಲಭ್ಯಗಳನ್ನು ನಿರ್ಮಿಸಲಾಗುತ್ತಿದೆ.